ನಿಮ್ಮೊಡನೆ

> ಪ್ರೀತಿ ಪ್ರೇಮದ ಭಾಷೆಗೆ ಅಕ್ಕರೆ, ಅಕ್ಷರಗಳೇ ಮಾಧ್ಯಮವಾಗಿದ್ದ ಕಾಲವಿತ್ತು. ಇದೀಗ ಎಲ್ಲದಕ್ಕೂ ಮಾರುಕಟ್ಟೆಯಲ್ಲಿ ಸಂಕೇತಿಸುವ ಪರಿಕರಗಳು, ಕೊಡುಗೆ ಮತ್ತು ಉಡುಗೊರೆಗಳು ಲಭ್ಯ ಇವೆ. ಈ ಕೊಡುಕೊಳ್ಳುವಿಕೆಗಳು ಪ್ರೀತಿ ಪ್ರೇಮವನ್ನೂ ವ್ಯಾವಹಾರಿಕ ಮಾಡುತ್ತಿವೆಯೇ?

# ಪ್ರೇಮವೆಂಬುದು ಬರಿಯ ಶಬುದವಲ್ಲ

ಫೆಬ್ರುವರಿ ಮಾಸ ಬಂತೆಂದರೆ ಸಾಕು, ವಾತಾವರಣದಲ್ಲೆಲ್ಲ ಪ್ರೀತಿ ಪಿಸುಗುಡಲಾರಂಭಿಸುತ್ತದೆ. 90ರ ದಶಕದಲ್ಲಿ ಜಾಗತೀಕರಣದ ಪರಿಣಾಮವಾಗಿ ಇದ್ದಕ್ಕಿದ್ದಂತೆ ಎಲ್ಲದಕ್ಕೂ ಒಂದೊಂದು ದಿನಗಳನ್ನು ಹೆಸರಿಸಿ, ಆಚರಣೆಗೆ ಬರತೊಡಗಿದವು. ಹೆಚ್ಚು ಪ್ರಚಲಿತಕ್ಕೆ ಬಂದಿದ್ದು ವ್ಯಾಲೆಂಟೈನ್ಸ್ ಡೇ. ಹೆಸರಾಂತ ಕಂಪನಿಯ ಶುಭಾಶಯ ಕೋರುವ ಕಾರ್ಡುಗಳು ಆ ಕಾಲದಲ್ಲಿ ಹತ್ತೂರಾಯಿಯಿಂದ ನೂರಾರು ರೂಪಾಯಿ ಬೆಲೆಬಾಳುವಂಥವು ಲಭ್ಯವಾಗತೊಡಗಿದವು. ಪ್ರೀತಿ ಪಸರಿಸತೊಡಗಿದ್ದು ಇಂಗ್ಲಿಷ್ ಒಕ್ಕಣೆಗಳಲ್ಲಿ. ಸುವಾಸಿತ ಕಾರ್ಡು, ಸಂಗೀತಮಯ ಮಧುರ ಕಾರ್ಡುಗಳಲ್ಲಿ.

ಮಾರುಕಟ್ಟೆ ಈ ದಿನವನ್ನು ಹೇಗೆ ಸೆಳೆಯಿತೆಂದರೆ ಮುಂದಿನ ವರ್ಷಗಳಲ್ಲಿ ವ್ಯಾಲೆಂಟೈನ್ಸ್ ಡೇ ಎಂಬುದು ಸಪ್ತಾಹವಾಗಿ ಬದಲಾಯಿತು. ಚಾಕ್ಲೇಟು, ಮೆದು ತುಪ್ಪಳದ ಬೊಂಬೆ, ಹಳದಿ, ಕೆಂಪು, ಬಿಳಿ, ಗುಲಾಬಿ ಹೂಗಳ ದಿನಗಳಾಗಿಯೂ, ಉಡುಗೊರೆಗಳ ದಿನಗಳೂ ಈ ಸಪ್ತಾಹದಲ್ಲಿ ಬಂದವು. ಇನ್ನು ಇದಕ್ಕೆ ಭಾರತೀಯ ಸ್ಪರ್ಶ ಎಂಬಂತೆ ಚಿನ್ನ, ಬೆಳ್ಳಿ, ವಜ್ರ ವೈಢೂರ್ಯಗಳ ಕೊಡುಗೆಗಳೂ ಮಾರುಕಟ್ಟೆಗೆ ಲಗ್ಗೆ ಇಟ್ಟವು.

ಪ್ರೀತಿಯೆಂದರೆ ಗೆಲುವು ಮಾತ್ರವಲ್ಲ, ಸೋಲೂ ಹೌದು ಎಂದು ವ್ಯಾಲೆಂಟೈನ್ಸ್ ಡೇ ನಂತರದ ಸಪ್ತಾಹವನ್ನು ಭಗ್ನ ಪ್ರೇಮಿಗಳಿಗಾಗಿಯೂ ಆಚರಿಸಲಾಗುತ್ತಿದೆ.

ಆಚರಣೆಗಳಲ್ಲಿ ಉಡುಗೊರೆ ಕೊಟ್ಟು ಪ್ರೀತಿ ತೋರಿಸಲಿ ಎಂಬಂತೆ ವ್ಯಾಪಾರಿಗಳು ಈ ಭಾವನೆಗಳನ್ನೇ ಬಂಡವಾಳವಾಗಿಸಿಕೊಂಡರು. ಕೊಳ್ಳುವ ಶಕ್ತಿ ಹೆಚ್ಚಾದಂತೆಲ್ಲ ಜನರೂ ತಮ್ಮ ಸಮಯವನ್ನು ಉಡುಗೊರೆಗಳೊಂದಿಗೆ ಬದಲಿಸುತ್ತ ಬಂದರು. ಇಲ್ಲಿಯೇ ಪ್ರೇಮ, ಅವಲಂಬನೆ ಎಲ್ಲವೂ ಸೊರಗುತ್ತ ಹೋದವು. ಪ್ರೇಮವೆಂಬ ಅನುಭೂತಿ, ಪ್ರದರ್ಶನದ ವಸ್ತುವಾಗಿ ಬದಲಾಯಿತು. ಸಂಗಾತಿಗಳ ನಡುವೆ ಪರಸ್ಪರ ಅವಲಂಬನೆಯ ಬದಲಿಗೆ ನಿರೀಕ್ಷೆಗಳ ಬೆಟ್ಟ ಬೆಳೆಯುತ್ತ ಹೋಗಿದ್ದು ಇಂಥ ದಿನಗಳ ಆಚರಣೆಗಳ ವಿಧಾನದಿಂದ. ಆಚರಣೆಗಳಲ್ಲಿ ಎಲ್ಲ ಕೂಡಿ, ಸಮಯ ಕಳೆದು, ನೆನಪುಗಳನ್ನು ಗಳಿಸಿ, ಬದುಕಿನಲ್ಲಿ ಬಾಂಧವ್ಯ ಗಟ್ಟಿಗೊಳಿಸಿಕೊಳ್ಳಬೇಕು. ಅದಕ್ಕೇನೆ ಹಬ್ಬದಾಚರಣೆಗಳಲ್ಲೆಲ್ಲ ಬಂಧು ಬಾಂಧವರೊಂದಿಗೆ ಕೂಡಿ ಊಟ ಮಾಡುವುದು, ಕೊಟ್ಟುಕೊಳ್ಳುವ ಸಂಪ್ರದಾಯಗಳನ್ನು ಇರಿಸಿರುವುದು.

ಉಡುಗೆ–ತೊಡುಗೆ, ಆಭರಣ, ಗ್ಯಾಜೆಟ್ಟುಗಳು ಎಲ್ಲದಕ್ಕೂ, ಎಲ್ಲವನ್ನೂ ಕೊಡುತ್ತಲೇ ಇರಿ, ನಿಮ್ಮ ಮೊದಲ ಸ್ಪರ್ಶ, ಪಿಸುಮಾತು, ಮನದ ಮಾತುಗಳಿರುವ ಪ್ರೇಮಪತ್ರ, ಮನಕೆ ಪುಳಕ ಕೊಡುವ ಸಂಗಾತಿಯ ಕನಸುಗಳು ಎಲ್ಲವನ್ನೂ ಕೊಡುಗೆಯಾಗಿ ಪರಿವರ್ತಿಸುವ ಬ್ರ್ಯಾಂಡಿಂಗ್ ಟೀಮುಗಳಿಂದು ಹಗಲೂ ರಾತ್ರಿ ಶ್ರಮಿಸುತ್ತಿವೆ. ಇಂದಿನ ವ್ಯಾಪಾರಿಗಳು ಭಾವನೆಗಳನ್ನೇ ವ್ಯಾಪಾರದ ಸರಕಾಗಿಸಿದ್ದಾರೆ.

ಸೆಲ್ಫಿಗಳಲ್ಲಿ ಮೈಮರೆಯುವ ಯುವಜನತೆಯ ಅತಿಮುಖ್ಯವಾದ ಭಾವವೆಂದರೆ, ‘ನಾನು ಮುಖ್ಯ, ನಾನೇ ಮುಖ್ಯ’. ಇದನ್ನೇ ಕಸ್ಟಮೈಸ್ಡ್ ಎಂಬ ಲೇಬಲ್ ಹಾಕಿ, ಅವರ ಹೆಸರುಗಳನ್ನೇ ಕೆತ್ತಿ ಕೊಡುವುದೂ ಆರಂಭವಾಯಿತು. ಇಷ್ಟೆಲ್ಲ ಉತ್ಪಾದಕ, ಉತ್ಪಾದನೆ ಹಾಗೂ ಗ್ರಾಹಕರ ಭರಾಟೆಯಲ್ಲಿ ಕಳೆದುಹೋಗುತ್ತಿರುವುದು ಏನು?

ಪ್ರೀತಿ ಪ್ರೇಮವೆಂದರೆ ಬರಿಯ ಭಾವನೆಗಳು, ಬಾಂಧವ್ಯ ಮಾತ್ರವಲ್ಲ. ಅದು ಪರಸ್ಪರ ನೀಡುವ ಸಮಯ. ಜೀವನವೆಂದರೆ ಕೇವಲ ಒಡವೆ, ಒಡ್ಯಾಣ, ಗ್ಯಾಜೆಟ್‌ಗಳಲ್ಲ, ನೆನಪುಗಳನ್ನು ಸೃಷ್ಟಿಸಿಕೊಳ್ಳುವುದು. ಕಣ್ಮುಚ್ಚಿ ಯೋಚಿಸಿದಾಗ ನೆನಪಾಗುವುದು ಯಾರೆಲ್ಲ, ಏನೆಲ್ಲ ಕೊಟ್ಟರು ಎಂಬುದಲ್ಲ. ಕೇವಲ ಖುಷಿಯಾಗಿದ್ದ ಕ್ಷಣಗಳು, ಸಂಭ್ರಮದ ನೆನಪುಗಳು, ಜಗಳವಾಡಿದಾಗ ನೊಂದಿದ್ದು, ಪಶ್ಚಾತ್ತಾಪ, ಪ್ರಾಯಶ್ಚಿತ್ತ ಇಂಥವೇ ಭಾವಗಳು. ನಾವು ಇಂಥ ಭಾವಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಮೆಮರಿ ಚಿಪ್‌ಗಳ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತ, ನಮ್ಮ ನೆನಪುಗಳನ್ನು ಕಡಿಮೆ ಮಾಡಿಕೊಳ್ಳುತ್ತಿದ್ದೇವೆ. ಬದುಕಿರುವುದು ಆನಂದಿಸಲು. ಕಳೆದುಹೋಗಲು ಅಲ್ಲ, ಸವೆಸಿ ಹೋಗಲು ಅಲ್ಲ, ಸವೆದು ಹೋಗಲು ಅಲ್ಲ. ಈ ದಿನಾಚರಣೆಗಳನ್ನೆಲ್ಲ ನೋಡುತ್ತಲೇ, ನಮ್ಮೊಳಗನ್ನೂ ನಾವು ಇಣುಕಬೇಕಿದೆ.

ಪ್ರೀತಿ–ಪ್ರೇಮ; ಮಮಕಾರ–ಅಂತಃಕರಣ ಇವನ್ನೆಲ್ಲ ಹಂಚುತ್ತ ಜೀವನಪ್ರೀತಿಯನ್ನು ಹೆಚ್ಚಿಸುವಂಥ ಆಚರಣೆಗಳತ್ತ ಮುಖಮಾಡಬೇಕಿದೆ. ಅದಕ್ಕೆ ಈ ಕೊಡುಗೆ, ಉಡುಗೊರೆ ಇವೆಲ್ಲ ಸಾಧನವಾಗಬೇಕೆ ಹೊರತು ಅವೇ ಮೂಲ ದ್ರವ್ಯವಾಗಬೇಕಿಲ್ಲ.

■ ರಶ್ಮಿ ಎಸ್



ವಿಜಯ